ಶ್ರೀ ಬಿ. ಎ. ಮೊಹಿದ್ದೀನ್.—ಸ್ವಾಮಿ, ಸರ್ಕಾರದವರು ಬೇಸಾಯಿಗಾರರಿಗೆ ೧೦೦ ಸಿ.ಎಫ್.ಟಿ. ಮರಗಳನ್ನು ಪರವಾನಗಿಯಿಲ್ಲದೆ ಕಡಿಯುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. ಆದರೆ, ಆ ಮರಗಳನ್ನು ಸೀಳಲಿಕ್ಕೆ ರೇಂಜ್ ಫಾರೆಸ್ಟ್ ಆಫೀಸರ್ ಪರ್ಮಿಷನ್ ತೆಗೆದುಕೊಳ್ಳುವಂತೆ ಮಾಡಿದ್ದೀರಿ, ಇದರಿಂದ ಸಣ್ಣ ಸಣ್ಣ ರೈತರಿಗೆ ಬಹಳ ತೊಂದರೆಯಾಗಿದೆ. ಈಗ ಇರತಕ್ಕ ಕಾನೂನನ್ನು ಸರಳ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ನಾನು ಅರ್ಥ ಮಾಡಿಕೊಂಡಿದ್ದೇನೆ. ಮರ ಸೀಳಲಿಕ್ಕೆ ರೇಂಜ್ ಫಾರೆಸ್ಟ್ ಅಧಿಕಾರಿಗಳ ಪರ್ಮಿಷನ್ ಇರಲೇಬೇಕು. ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ. ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಈಗ ಇರತಕ್ಕ ಕಾನೂನನ್ನು ಸರಳವಾಗಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ಡಿ. ಕೊಡಗಿ.—ಗುಂಡಿ ಲೈಸೆನ್ಸ್ ಪಡೆಯುವುದು ಬಹಳ ಕಷ್ಟ ಇದೆ. ಸರ್ಕಾರ ಸಣ್ಣ ಬೇಸಾಯಗಾರರಿಗೆ ೧೦೦ ಸಿ.ಎಫ್.ಟಿ. ಮರಗಳನ್ನು ಕಡಿಯಲಿಕ್ಕೆ ಪರ್ಮಿಷನ್ ಕೊಟ್ಟಿದ್ದೀರಿ. ಮರ ಗಳನ್ನು ಕಡಿದ ನಂತರ ಸಿಗಿಯಬೇಕಾದರೆ ಪರ್ಮಿಷನ್ ತೆಗೆದುಕೊಳ್ಳಬೇಕು. ಮತ್ತೆ ಪರ್ಮಿಷನ್ ತೆಗೆದು ಕೊಳ್ಳುವುದರಿಂದ ತಾವು ಈಗಗಾಲೇ ಕೊಟ್ಟಿರತಕ್ಕ ಲೈಸೆನ್ಸ್‌ನ್ನು ವಾಪಸ್ ಪಡೆದಂತಾಗುತ್ತದೆ ? ಗುಂಡಿ ಲೈಸೆನ್ಸ್ ಪಡೆಯಬೇಕಾದರೆ. ಸ್ವಾಧೀನತೆಯ ಸರ್ಟಿಫಿಕೇಟ್ ಕೊಡಬೇಕು. ತಹಶೀಲ್ದಾರ್ ಹತ್ತಿರ ಹೋಗ ಬೇಕು. ತಮ್ಮ ಉದ್ದೇಶ ಸೈಗಲಿಂಗ್ ತಪ್ಪಿ ಆಬೇಕೆಂಬುದು, ದೊಡ್ಡ ದೊಡ್ಡ ಸೈಗಲಿಂಗ್ ಮಾಡುವವರು ಮರಗಳನ್ನು ಅಲ್ಲಿಯೇ ಸಿಗಿಯುವುದಿಲ್ಲ. ಬೇರೆ ಕಡೆಗೆ ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ತೆಗೆದುಕೊಂಡು ಹೋಗಿ ಸಿಗಿಸುತ್ತಾರೆ. ಅದ್ದರಿಂದ ಸಣ್ಣ ರೈತರ ದೃಷ್ಟಿಯಿಂದ ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಉತ್ತರಕೊಟ್ಟಿದ್ದೇನೆ. ರೈತರಿಗೆ ತೊಂದರೆಯಾಗದ ರೀತಿಯಲ್ಲಿ ಪುನರ್‌ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ಲೈಸೆನ್ಸ್‌ಗೆ ಓಡಾಡುವುದರಿಂದ ಸಮಯ ಕೂಡ ಹೋಗುತ್ತೆ. ಅಲ್ಲದೆ ಅಧಿಕಾರಿಗಳನ್ನು ಸಮಾಧಾನ ಮಾಡಲಿಕ್ಕೆ ಆಗತಕ್ಕ ಖರ್ಚಿನಲ್ಲಿ ಮರಗಳನ್ನೇ ಕೊಳ್ಳಬಹುದು. ಆದ್ದರಿಂದ ಗುಂಡಿ ಲೈಸೆನ್ಸ್ ಬಗ್ಗೆ ಸರ್ಕಾರ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್, ಗುಂಡೂರಾವ್.—ನಿಮಗಿಂತ ಹೆಚ್ಚಿಗೆ ನನಗೆ ಅನುಭವ ಇದೆ. ಸರಳ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಅಹಮದ್.—ಸ್ವಾಮಿ, ಮೈದಾನ ಪ್ರದೇಶದಲ್ಲಿ ಮಲೆನಾಡಿನಲ್ಲಿದ್ದಂತೆ ಅರಣ್ಯ ಇಲ್ಲ. ಇಲ್ಲಿ ಮರಗಳನ್ನು ಕಠಾವಣಿ ಮಾಡಿ ಮಾರಾಟ ಮಾಡಬೇಕಾದರೆ ಮರ್ಚಂಟ್ಸ್‌ಗಳಿಗೆ ಬಹಳ ತೊಂದಾ ಯಾಗುತ್ತದೆ ಆದ್ದರಿಂದ ಮೈದಾನ ಏರಿಯಾಕ್ಕೆ ಬೇರೆ ಕಾನೂನು ಮಾಡುವುದಕ್ಕೆ ಪ್ರಯತ್ನ ಮಾಡು ತ್ತೀರಾ ಸ್ವಾಮಿ ?

ಶ್ರೀ ಆರ್. ಗುಂಡೂರಾವ್ —ಅಧ್ಯಕ್ಷರೇ, ಮೈದಾನ ಪ್ರದೇಶಗಳಲ್ಲಿ ಈ ಕಾನೂನನ್ನು ಇನ್ನೂ ಕಠಿಣವಾಗಿ ಜಾರಿಗೆ ತರಬೇಕು. ಅಲ್ಲಿ ಮರಗಳನ್ನು ಕಡಿಯುವುದಕ್ಕಿಂತ ಬೆಳೆಸುವುದು ಬಹಳ ಮುಖ್ಯ. ಈಗಾಗಲೇ ಮೈದಾನ ಪ್ರದೇಶಗಳಲ್ಲಿ ಅರಣ್ಯ ಇಲ್ಲದೆ ಬಹಳ ತೊಂದರೆ ಆನುಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕಾನೂನು ಸರಳ ಮಾಡುವಾಗ ಎಲ್ಲಾ ವಿಚಾರಗಳನ್ನು ಯೋಚನೆ ಮಾಡೋಣ.

Enhancement of Motor Vehicles Tax on Goods Vehicles.

701. SRI M. S. ATMANANDA (Mandya).—Will the Minister for Transport and Minor Irrigation be pleased to state,—

(a) Whether it is a fact that Government has enhanced the Motor Vehicle Tax ;

(b) if so, the rates of enhancement (details to be furnisned);

(c) whether it is a fact that many transport operators are experiencing hardship due to this enhancement ?

SRI M. M. J. SADYOJATHA (Minister for Transport and Minor Irrigation).—

(a) Yes.

(b) Statements laid on the Table.

(c) Representations have been received from the Transpors Operators stating that they are experiencing hardship due to thit enhancement.

ಶ್ರೀ ಎಂ. ಎಸ್. ಆತ್ಮಾನಂದ.—ನೆರೆ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ವಿಧಿಸಿರುವ ತೆರಿಗೆ ಹೆಚ್ಚಾಗಿದೆ ಯಲ್ಲವೆ ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ಎಂ. ಎಂ. ಜೆ ಸದ್ಯೋಜಾತ.—ಅದನ್ನು ಪರಿಶೀಲಿಸುವ ಸಲುವಾಗಿ ಒಂದು ಸಮಿತಿ ಯನ್ನು ಮಾಡಿದ್ದೆವು; ಅದು ಈಗ ತನ್ನ ವರದಿಯನ್ನು ಕೊಟ್ಟಿದೆ; ಮತ್ತು ಆ ವರದಿ ಕ್ಯಾಬಿನೆಟ್ ಮುಂದಿದೆ, ಆ ಬಗ್ಗೆ ಆದಷ್ಟು ಬೇಗ ಒಂದು ನಿರ್ಣಯ ತೆಗೆದು ಕೊಳ್ಳುತ್ತೇವೆ.

Misappropriation in Malleswara Processing Co-operative Society at Hagribommanahalli.

723 SRI M. RAMAPPA (Kurugodu)—Will the Minister for Co-operation be pleased to state:—

(a) whether the Malleswara Processing Co-operative Society, Hagribommanahalli, Bellary District has been liquidated

(b) if so, what are its assets and liabilities at present;

(c) the steps taken by Government to recover the defalcated and misappropriated amounts;

(d) the steps taken on those responsible for defalcation misappropriation (detailed information be furnished) ?

SRI A, B. JAKANUR (Minister for Co-operation)--

(a) No.

(b) Does not arise in view of reply to clause (A) above.

(c) Criminal and civil cases were filed against the concerned responsible.

(d) Criminal cases covering Rs. 1,05,836.07 were filed against the accused Managing Director and Ex-Secretary of the society

Civil cases (Arbitration cases) were filed for Rs, 2,39,951.04 against the above two persons